ಎಂ.ವಿ.ಸಿಃ 83/2024
ಪಿ.ಡಬ್ಲ್ಯೂ : 02

ಸಾಕ್ಷಿದಾರರ ಹೆಸರು : ಡಾ ಶಿವಶಂಕರ್ ಕೆ ಎನ್
ತಂದೆಯ ಹೆಸರು : ದಿ. ಎನ್ ವಿ ಪದ್ಮನಾಭ ಆಚಾರ್ಯ
ವಯಸ್ಸು : 56
ಉದ್ಯೋಗ : ಪ್ರೊಫೆಸರ್, ಕೆಎಂಸಿ ಮಣಿಪಾಲ ಆಸ್ಪತ್ರೆ
ವಾಸಸ್ಥಳ : ಉಡುಪಿ

ದಿನಾಂಕ 05-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರವರಿಂದಃ

ನಾನು ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-20 | ಕೇಸ್ ಶೀಟ್, |
| ನಿಪಿ-21 | ಎಕ್ಸ್ ರೇಗಳು. |

ನಾನು ಕಳೆದ 29 ವರ್ಷಗಳಿಂದ ಕೆ ಎಂ ಸಿ ಮಣಿಪಾಲ ಆಸ್ಪತ್ರೆ ಯಲ್ಲಿ ಫ್ರೊಪೆಸ್ರರ್ ಮೆಡಿಸಿನ್ ಆಗಿ ಕರ್ತವ್ಯ ನಿರ್ವಹಿಸುತಿದ್ದೇನೆ .

ನಮ್ಮ ಕೆ ಎಂ ಸಿ ಮಣಿಪಾಲ ಆಸ್ಪತ್ರೆಯ ದಾಖಲೆಗಳ ಪ್ರಕಾರ ಗಣಪತಿ ಆಚಾರ್ಯ ಎನ್ನುವವರು ಮಾರ್ಚ್ 2023 ರಲ್ಲಿ ಅಪಘಾತದಲ್ಲಿ ಗಾಯಗೊಂಡಿದ್ದ ಪರಿಣಾಮ ನಮ್ಮ ಕೆ ಎಂ ಸಿ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಗಾಗಿ ದಾಖಲಾಗಿದ್ದರು. ನಿಪಿ9 ಗಾಯದ ಪ್ರಮಾಣ ಪತ್ರ ನಮ್ಮ ಕೆ ಎಂ ಸಿ ಮಣಿಪಾಲ ಆಸ್ಪತ್ರೆಯಿಂದ ನೀಡಲಾಗಿರುತ್ತದೆ. ನಿಪಿ-9 ರಲ್ಲಿ ನಮೂದು ಮಾಡಿರುವ ಗಾಯಗಳ ಬಗ್ಗೆ ಸರ್ಜರಿ ಮಾಡಿದ ವೈದ್ಯರು ಹೇಳಬಹುದು ನನಗೆ ಹೇಳಲು ಸಾಧ್ಯವಿಲ್ಲ. ನಾನು ಹಾಜರುಪಡಿಸಿರುವ ಕೇಸ್ ಫೈಲ್ ಮತ್ತು ಎಕ್ಸರೇ ಗಣಪತಿ ಆಚಾರ್ಯರವರಿಗೆ ಸಂಬಂಧಿಸಿರುತ್ತದೆ .

ಪಾಟೀ ಸವಾಲುಃ **2** ನೇ ಎದುರುದಾರ ಪರ ವಕೀಲರಿಂದಃ

ನಮ್ಮ ಆಸ್ಪತ್ರೆಯ ನನ್ನ ವಿಭಾಗದಲ್ಲಿ ಗಣಪತಿ ಆಚಾರ್ಯ ರವರು ದಿ 03-05-2023 ರಂದು ಸುಸ್ತು , ಬಿಕ್ಕಳಿಕೆ , ಜ್ವರ ಮತ್ತು ಹೊಟ್ಟೆಯು ಉಬ್ಬಿದ ಕಾರಣ ದಾಖಲಾಗಿದ್ದರು . ಗಣಪತಿ ಆಚಾರ್ಯ ರವರನ್ನು ಪರೀಕ್ಷಿಸಿದಾಗ ಅವರ ರಕ್ತದಲ್ಲಿ ಉಪ್ಪಿನ ಅಂಶ ಕಡಿಮೆ ಇತ್ತು ಎಂದು ಕಂಡುಬಂದಿತು . ಸದರಿ ಗಣಪತಿ ಆಚಾರ್ಯ ರವರಿಗೆ ಅಪಘಾತದಲ್ಲಿ ಆದಂತಹ ಗಾಯಗಳಿಂದ ಗುಣಮುಖರಾಗಿ ನಂತರ ಅವರು ಮೆಡಿಕಲ್ ಹೆಲ್ತ್ ಸಮಸ್ಯೆ ಆದ ಕಾರಣ ನಮ್ಮ ವಿಭಾಗದಲ್ಲಿ ದಾಖಲಾಗಿದ್ದರು . ನಾವು ಅವರನ್ನು ಪರೀಕ್ಷಿಸಿದಾಗ ಅವರಲ್ಲಿ low sodium ಖಾಯಿಲೆ ಕಂಡುಬಂದಿರುತ್ತದೆ . ಅವರಿಗೆ ಒಂದು ದಿನ ಜ್ವರ ಬಂದಿದ್ದು ಸ್ಕ್ಯಾನಿಂಗ್ ಮಾಡಿದಾಗ ಬಲ ಕಿಡ್ನಿ ಹಾಗೂ urine infection ಆದ ಬಗ್ಗೆ ಗೊತ್ತಾಯಿತು .ನಂತರ ಅವರಿಗೆ ಬಲ ಕೈ ಗೆ ಬಾಹು ಬಂದಿತ್ತು . ಈ ತಪಾಸಣೆಯಿಂದ cellulitis ಎಂದು ಕಂಡುಬಂತು . ತಪಾಸಣೆ ಸಮಯದಲ್ಲಿ ಎಡ ಕಂಕುಳದಲ್ಲಿ ಒಂದು ಗಡ್ಡೆ ಕಂಡುಬಂತು . ಅದರ ಜೊತೆಗೆ ಸಿಟಿ ಸ್ಕ್ಯಾನ್ ಮತ್ತು ಅಲ್ಟ್ರಾಸೌಂಡ್ ಮಾಡಿದಾಗ ಎದೆ ಗೂಡಿನಲ್ಲಿ ನೀರು ತುಂಬಿದ್ದು ಕಂಡುಬಂತು . ಸದರಿ ನೀರಿನ ಹಾಗೂ ಗಡ್ಡೆಯ ಬಯಪ್ಸಿ ಪರೀಕ್ಷೆಯಿಂದ ಅವರಿಗೆ ಕ್ಯಾನ್ಸರ್ ಆಗಿರುವುದು ಕಂಡುಬಂತು . ಹೆಚ್ಚಿನ ಪರೀಕ್ಷೆ ಮಾಡಿದಾಗ ಅವರ ಹೊಟ್ಟೆಯಲ್ಲಿ , ಎದೆಗೂಡಿನಲ್ಲಿ ಮತ್ತು ಕಂಕುಳದಲ್ಲಿ ಕ್ಯಾನ್ಸರ್ ಗಡ್ಡೆಗಳು ಇರುವುದು ಕಂಡುಬಂತು . ಅವರಿಗೆ ಬಿಪಿ , ಕಿಡ್ನಿ ಪಂಕ್ಷನ್ ಮತ್ತು ಲಿವರ್ ಪಂಕ್ಷನ್ ಸರಿಯಾಗಿ ಕಾರ್ಯ ನಿರ್ವಹಿಸುತಿರಲಿಲ್ಲ ಮತ್ತು ರಕ್ತ ಹೆಪ್ಪು ಗಟ್ಟುತಿರಲಿಲ್ಲ ನಾವು ಚಿಕಿತ್ಸೆ ನೀಡಿದರೂ ಕೂಡ ಅವರ ಸ್ಥಿತಿ ಸುಧಾರಿಸದೇ ಅವರು ದಿ 24-05-2023 ರಂದು ಚಿಕಿತ್ಸೆ ಫಲಕಾರಿಯಾಗದೇ ಅದೇ ಕಾರಣದಿಂದ ಅವರು ಮರಣ ಹೊಂದಿರುತ್ತಾರೆ. ಮರಣ ಹೊಂದಿದನಂತರ ದಿ 27-05-2023 ರಂದು ಬಯಪ್ಸಿ ರಿಪೋರ್ಟ್ ನಿಂದ ಕ್ಯಾನ್ಸರ್ ಆಗಿರುವುದನ್ನು ಖಚಿತಪಡಿಸಿಕೊಂಡಿರುತ್ತೇವೆ . ಸಾಕ್ಷಿಗೆ Cytology and histopathology report ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡ ಕಾರಣ ಅವುಗಳನ್ನು ನಿಆರ್-1 ಮತ್ತು ನಿಆರ್ -2 ಎಂದು ಗುರುತಿಸಲಾಯಿತು . ಗಣಪತಿ ಆಚಾರ್ಯ ರವರು ಸುಮಾರು 22 ದಿನಗಳ ಕಾಲ ನಮ್ಮ ವಿಭಾಗದಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ . ವರದಿಗಳ ಪ್ರಕಾರ ಸದರಿ ಗಣಪತಿ ಆಚಾರ್ಯ ರವರಿಗೆ

pancreatic cancer ಆಗಿತ್ತು . ಅಪಘಾತದಿಂದ ಆದ ಗಾಯಗಳಿಗೂ ಮತ್ತು ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.